

ಅವನು ನಮಗೆ ಈಗಲೂ ಅತ್ಯಂತ ಆಧುನಿಕನೇ. ಇದರರ್ಥ, ಇನ್ನು ಹತ್ತು ಶತಮಾನ ಅವನನ್ನು ನಾವು ಸಂಪೂರ್ಣ ಒಪ್ಪಿ ಅಪ್ಪಿಕೊಳ್ಳಲು ಬೇಕಾಗಬಹುದು ಅಥವಾ ಅದು ಆಗದೆಯೂ ಇರಬಹುದು. ಅಂದರೆ ಅವನು ತಾನು ಬರಬೇಕಿದ್ದ ಸಮಯಕ್ಕೂ ಮೊದಲೇ ಲೋಕಕಾಲದ ಸರೋವರದಲ್ಲಿ ಬಂದರಳಿ, ಸ್ವಾಮಿ ವಿವೇಕಾನಂದರಂತೆಯೇ ನಮ್ಮ ಮುಂದೆ ದೇವಕಮಲದಂತೆ ವಿಕಸಿಸಿದವನು. ಅದರಿಂದಾಗಿಯೇ ಸಂಕಷ್ಟಗಳ ಸರಮಾಲೆಯಾದವನು. ಈ ಅರ್ಥದಲ್ಲಿ ಜಗತ್ತು ಬಹಳ ಹಿಂದಿರುವುದರಿಂದ, ಮುಂದೆ ಬಂದಿರುವ ನಾವು ನಿರಂತರ ನೋವುಣ್ಣಬೇಕಾಗುವುದು ಸಹಜ. ಇದಕ್ಕೆ ಎದೆಗುಂದಿದರಾಗದು. ನಮ್ಮತನವನ್ನು ನಾವು ಬಿಡದೆ, ಲೋಕೋದ್ಧಾರಕ್ಕೆ ಶ್ರಮಿಸಿ, ಸುಗಂಧ ಪಸರಿಸುತ ಸವೆಯುತ್ತಿರಬೇಕೆಂಬ ವಿಚಾರಸುಧೆಯ ಅಪೂರ್ವ ದನಿಯನ್ನು ಈ ಕವಿತೆಯಲ್ಲಿ ಸ್ವಾಮೀಜಿ, **'ನೀಲ ಕುಸುಮ'** ಪ್ರತಿಮೆಯಲ್ಲಿ ಕೊಟ್ಟು, ಕವಿಯ ಪ್ರತಿಭಾ ವ್ಯಾಪಾರವು ಅಂತರ್‌ದೃಷ್ಟಿಯೂ ಹೌದು, ಸೃಷ್ಟಿಯೂ ಹೌದು ಎಂಬುದನ್ನು ಸಾಬೀತುಪಡಿಸಿದ್ದಾರೆ. ಆ ಮೂಲಕ ಅನ್ಯ ಮನೋಧರ್ಮಗಳನ್ನು ಸಹಾನುಭೂತಿಯಿಂದ ಅವರು ಒಳಹೊಕ್ಕು ದರ್ಶನಮಾಡಿ, ವಿಶಿಷ್ಟವೆನಿಸಬಹುದಾದ ಅಂತರನುಭವಗಳನ್ನು ಸಮರ್ಥವಾಗಿ ಅಕ್ಷರದಲ್ಲಿ ಅರಳಿಸಿ, ಕವಿಯಾಗಿ ಯಶಸ್ವಿಯಾಗಿದ್ದಾರೆ; ಹಾಗೆಯೇ ತಾವೊಬ್ಬ ದಾರ್ಶನಿಕ ಎಂಬುದನ್ನೂ ಸಾರಸ್ವತ ಲೋಕಕ್ಕೆ ಸಾದರಪಡಿಸಿದ್ದಾರೆ.

ಕಾವ್ಯವೆಂದರೆ ಬರಿಯ ಕಲ್ಪನೆಯಲ್ಲ, ಬರಿ ವಾಸ್ತವವೂ ಅಲ್ಲ, ಕೇವಲ ಬುದ್ಧಿಗಮ್ಯ ಆನಂದವೂ ಅಲ್ಲ, ಕೇವಲ ಕಿವಿಯ ಇಂಪೂ ಮನದ ತಂಪೂ ಅಲ್ಲ, ಕೇವಲ ಭಾವತೀವದ ಸಂಪೂ ಅಲ್ಲ. ಸ್ಫೂರ್ತಿಯ ಉದ್ರೇಕ ಮಾತ್ರವೂ ಅಲ್ಲ. ಛಂದಸ್ಸು, ಲಯ, ಗೇಯತೆಗಳಿಂದ ಕೂಡಿದ ಸುಂದರವಾದ, ಅರ್ಥಪೂರ್ಣವಾದ ಪದಪುಂಜಗಳಿಂದ ರಚಿಸಿದ ಸೌಂದರ್ಯದ ಸಮಾಗಮ ಮಾತ್ರವೂ ಅಲ್ಲ, ಕೇವಲ ಮಂತ್ರ ತಂತ್ರವೂ ಅಲ್ಲ. ಅದರೆ ಇವೆಲ್ಲವನ್ನೂ ಸೇರಿಸಿಕೊಂಡ, ಇವುಗಳಾಚೆಗಿನ ಇನ್ನೇನನ್ನೋ ಒಳಗೊಂಡ, ನಿತ್ಯ ನಿರಂತರ ನಡೆವ, ಮುನ್ನಡೆವ ಜೀವನ್ಮುಖಿಯಾತ್ರೆ, ಸತ್ಯದ ಶೋಧನೆ, ಬಾಳಿನೊಲವ ಸಾಕ್ಷಾತ್ಕಾರ, ಆತ್ಮಾವಿಷ್ಕಾರ, ಆತ್ಮದರ್ಶನ; ಅಷ್ಟೇ ಅಲ್ಲ ಪರಮಾತ್ಮದರ್ಶನ!

ಇದನ್ನು ಹೃನ್ಮನತುಂಬಿ ಸ್ವಾಮೀಜಿಯವರೇ ತಮ್ಮ **'ಓ ನನ್ನ ಸಖನೆ!'** ಎಂಬ ಕವಿತೆಯಲ್ಲಿ ಕಾಣಿಸಿದ್ದಾರೆ. ನಿಸ್ವಾರ್ಥ ಪ್ರೇಮದ ಮೇಲಿನ ಸುಂದರ ಭಾಷ್ಯದಂತಿರುವ ಈ ಸುದೀರ್ಘ ಕವಿತೆಯ ಕೊನೆಯ ನುಡಿಯನ್ನು ನೋಡಿ:

> **ಬಗೆ ಬಗೆಯ ರೂಪದಲ್ಲಿ ಜಗವ ತುಂಬಿಹನವನು,**
> **ಬರಿದೆ ಹುಡುಕುವೆ ಅವನ ಅಲ್ಲಿ – ಇಲ್ಲಿ !**
> **ಬಗೆಯೊಳೊಲುಮೆಯ ತುಂಬಿ ಭೇದವಿಲ್ಲದೆ ಕೊಟ್ಟರದುವೆ ಆತನ ಪೂಜೆ, ಸತ್ಯದಲ್ಲಿ !**

ಭೇದವಿಲ್ಲದೆ ಬದುಕುವುದು ಎಂದರೆ ತನ್ನ ಮತ್ತು ಇನ್ನೊಬ್ಬನ ನಡುವೆ ಎರಡೆಣಿಸದೆ ಬದುಕುವುದು. ಅರ್ಥಾತ್ ತನ್ನಂತೆಯೇ ಅವನೆಂದು ಬಗೆಯುವುದು. ಹೀಗಾದರದೇ ಸಗ್ಗ! ಇಂಥ ಜೀವನವೇ ದೇವನ ಸತ್ಯವಾದ ಪೂಜೆಯಾಗಬಲ್ಲದು. ಪಕ್ಕದವನಲ್ಲಿ ಪರಮಾತ್ಮನನ್ನು ಕಾಣಬೇಕೆಂಬ, ಅರಿವಿನ ಮೂಲಸತ್ಯದ, ಸಾಲಂಕೃತ ಭಾಷಾನಿರ್ಮಾಣದ, ಆದರ್ಶದ ಅತಿಶಯತೆಯನ್ನು ನಿರ್ಮಿಸುವ ಆಶಯದ ಅಭಿವ್ಯಕ್ತಿಯಾದ ಈ ಕವಿತೆ, ಸಾಧಾರಣ ದೃಷ್ಟಿಯ ಜಗತ್ತನ್ನು ಮುರಿದು ಕಟ್ಟುವ ಮೂಲ ಪ್ರತಿಭಾಧ್ಯೇಯಕ್ಕೆ ಸಾಕ್ಷಿಯಾಗಬಲ್ಲಂಥದು, ಗೇಯಾತ್ಮಕ ಪ್ರಜ್ಞೆಯಿಂದಲೂ ಸಹೃದಯಗಳನ್ನು ಸೆಳೆಯಬಲ್ಲಂಥದು.

ಹೀಗೆ, ವೀರಸಂನ್ಯಾಸಿಯಾದ, ತಪಸ್ವಿಯಾದ ಸ್ವಾಮಿ ವಿವೇಕಾನಂದರನ್ನು ಕವಿಯಾಗಿ ನೋಡುತ್ತ ಹೋದರೆ ಪುಟವೇನು, ಪುಸ್ತಕವೇ ಸಾಲದೇನೋ! ತಿಂಗಳೇನು, ವರ್ಷವೇ ಮುಗಿವವೇನೋ ! ಆದ್ದರಿಂದ, ಜನಪದರ ಬೀಸುವ ಕಲ್ಲಿನ ಪದದಂತೆ, **'ಇಂದಿಗೆ ಆಗ್ಯಾವು ಜೋಳ ನೋಡು, ನಾಳಿಗೆ ಮಿಕ್ಯಾವು ನಮ್ಮ ಹಾಡು'** ಎನ್ನದೇ ವಿಧಿ ಇಲ್ಲ! ಹೇಗೆ ನೋಡಿದರೂ ಅಸೀಮ ಧ್ವನಿಶಕ್ತಿಯ, ನಿರ್ದಿಗಂತ ವ್ಯಕ್ತಿತ್ವದ, ಸಹಜ ಶ್ರೇಷ್ಠ ಸಂತಕವಿಯಾದ ಸ್ವಾಮಿ ವಿವೇಕಾನಂದರ ಬರಹ ವಷ್ಟೇ ಅಲ್ಲ, ಅವರ ಬದುಕು ಕೂಡ ಎಂದೂ ಮುಗಿಯದ, ಮುಕ್ಕಾಗದ ಒಂದು ಅದ್ಭುತವಾದ, ಭವ್ಯ ದಿವ್ಯ ಮಹಾಕಾವ್ಯ!